ಇಟ್ಟುಕೊಂಡಿದ್ದೆ. ಸಂಪರ್ಕ ಸಂಖ್ಯೆಗಳಿಗಾಗಿ ಅದು ಬೇಕಿತ್ತು.

ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನದ ಗಡಿ ನಂಗ್ರಹಾರ್ ಹತ್ತಿರವೂ ಹೋಗಿದ್ದೆವು. ಯಾವ ಸಂವಹನವೂ ಸಾಧ್ಯ ಇಲ್ಲದಷ್ಟು ದುರ್ಗಮ ಪ್ರದೇಶವದು. ಪೇಶಾವರಕ್ಕೆ ಅದು ತುಂಬ ಹತ್ತಿರ. ಹೆಚ್ಚೂಕಡಿಮೆ ನಮ್ಮ ಜಮ್ಮು–ಕಾಶ್ಮೀರದ ಗಡಿಯಷ್ಟೇ ಬಿಗುವಿನ ಪರಿಸ್ಥಿತಿ ಅಲ್ಲಿತ್ತು. ತುಂಬ ಹಿಂದುಳಿದ ಪ್ರದೇಶ, ಅಲ್ಲಿನ ಜನರ ಜೀವನ ಕೂಡ ಸಂಕಷ್ಟದ್ದು.

ನನ್ನ ಸಂಸ್ಥೆ ಕೊಟ್ಟಿದ್ದ ಮೊಬೈಲ್ ಸ್ಯಾಟಲೈಟ್ ಡಿವೈಸ್ ನನ್ನ ಬಳಿಯಿತ್ತು. ಅದನ್ನು ಅಮೆರಿಕ ಸೇನೆಯ ಅನುಮತಿ ಮೇರೆಗೆ ಬಳಸಬೇಕಿತ್ತು. ಅದನ್ನು ಲ್ಯಾಪ್‌ಟಾಪ್‌ಗೆ ಅಳವಡಿಸಿಕೊಂಡು ಫೋಟೊಗಳನ್ನು ನಮ್ಮ ಕಚೇರಿಗೆ ಕಳಿಸುತ್ತಿದ್ದೆ. 500 ಪುಟದ ನೋಟ್ ಪುಸ್ತಕದ ಗಾತ್ರದಲ್ಲಿ ಆ ಡಿವೈಸ್ ಇತ್ತು. ಅದನ್ನು ಲ್ಯಾಪ್‌ಟಾಪಿಗೆ ಕನೆಕ್ಟ್ ಮಾಡಿಕೊಂಡರೆ, ಕಾಲ್ ಕೂಡ ಮಾಡಬಹುದಿತ್ತು. ನಾನು ಬಳಸುತ್ತಿದ್ದ ಸ್ಯಾಟಲೈಟ್ ಜಾಲದ ಹೆಸರು 'ತುರಯಾ'. ಅದೂ ಕೂಡ ಅಮೆರಿಕದ ಉಸ್ತುವಾರಿಯಲ್ಲಿತ್ತು. ಅಂದರೆ, ನಾನು ಕಳಿಸುವ ಫೋಟೊ ಇರಬಹುದು, ಮಾಹಿತಿ ಇರಬಹುದು – ಎಲ್ಲವನ್ನೂ ಪರಿಶೀಲಿಸಲು ಅವರಿಗೆ ಅವಕಾಶ ಇತ್ತು. ಅದನ್ನು ಬಳಸುವಾಗ ನಾನು ಕಡ್ಡಾಯವಾಗಿ ಸೇನಾ ಬಿಡಾರದಲ್ಲಿಯೇ ಇರಬೇಕಿತ್ತು. ಹೊರಗಡೆ ಬಳಸಲು ಅವಕಾಶ ಇರಲಿಲ್ಲ. ಯಾರಾದರೂ ಟ್ರ್ಯಾಕ್ ಮಾಡುವ ಅಪಾಯ ಇದೆ ಎಂಬ ಎಚ್ಚರಿಕೆಯನ್ನು ಅವರು ನೀಡಿದ್ದರು. ಸೇನಾ ಸುರಕ್ಷತೆಯ ವಲಯದಲ್ಲಿ ಮಾತ್ರ ಅದನ್ನು ಬಳಸುತ್ತಿದ್ದೆ. ಪ್ರತಿದಿನ ಕೆಲಸ ಮುಗಿಸಿಕೊಂಡು ಬಂದ ನಂತರ ನನ್ನ ಕಚೇರಿಗೆ ವರದಿಯನ್ನು ಒಪ್ಪಿಸುತ್ತಿದ್ದೆ. ಸಸ್ಯಾಹಾರ ಪದ್ಧತಿ ಇದೆ ಎನ್ನುವುದೇ ಅಮೆರಿಕದ ಸೈನಿಕರಿಗೆ ಕುತೂಹಲದ ಅಂಶವಾಗಿತ್ತು. ವೆಜ್ ಕಾನ್ಸೆಪ್ಟ್ ಗೊತ್ತಿರಲಿಲ್ಲ. 'ಬರೀ ತರಕಾರಿ ತಿನ್ನುತ್ತೀರಾ' ಎಂದು ಕೇಳುತ್ತಿದ್ದರು. 'ನೀವು ಇಂಡಿಯಾಕ್ಕೆ ಬನ್ನಿ, ತರಕಾರಿ ವೈವಿಧ್ಯ ನೋಡುವಿರಂತೆ' ಎಂದು ಹೇಳುತ್ತಿದ್ದೆ. ಬೆಳಿಗ್ಗೆ, ಮಧ್ಯಾಹ್ನ ಪಾಕೆಟ್ ಬರ್ತಾ ಇತ್ತು. ಅದರಲ್ಲಿ ಬಗೆ ಬಗೆಯ ಚಾಕೊಲೇಟ್, ಬಿಸ್ಕೆಟ್ ಸೇರಿದಂತೆ ಹಲವು ತಿನಿಸುಗಳು ಇರುತ್ತಿದ್ದವು. ಹಸಿರು ಮಾರ್ಕಿನ ಪಾಕೆಟ್‌ಗಳನ್ನು ಮಾತ್ರ ನಾನು ಬಳಸುತ್ತಿದ್ದೆ. ರಾತ್ರಿ ಊಟ ತುಂಬ ಅದ್ದೂರಿಯಾಗಿ ಇರುತ್ತಿತ್ತು. ಅದನ್ನು 'ಡಿಫ್ಯಾಕ್ ಡೈನಿಂಗ್ ಫೆಸಿಲಿಟಿ' ಅನ್ನುತಿದ್ದರು. ದೊಡ್ಡ ಹೋಟೆಲ್‌ನಲ್ಲಿನ ಬಫೆಯ ರೀತಿ ಬಗೆ ಬಗೆ ಪದಾರ್ಥ ಜೋಡಿಸಿರುತ್ತಾರೆ. ನಾನ್ ವೆಜ್ ಆಗಿದ್ದರೆ ತುಂಬಾ ಚೆನ್ನಾಗಿ ಊಟವನ್ನು ಅನುಭವಿಸಬಹುದಿತ್ತು. ಸಸ್ಯಾಹಾರಿ ಆಗಿದ್ದರಿಂದ ಅದರಿಂದ ವಂಚಿತನಾದೆ. ಐಸ್‌ಕ್ರೀಂ, ತರಕಾರಿ, ಆಲೂ ವೈವಿಧ್ಯ, ಸ್ನೀಕರ್ಸ್‌ಗಳ ಆಯ್ಕೆ ನನ್ನದಾಗಿತ್ತು.



'ಬ್ರದರ್ ಹುಡ್'
ಉಭಯತ್ರ ಸೈನಿಕರ
ಸಹಭೋಜನ

ಜಲಾಲಾಬಾದ್‌ನಲ್ಲಿ ರೆಸ್ಟೊರೆಂಟ್, ಪಿಜ್ಜಾ ಹಟ್ ಇದ್ದವು. ರೆಸ್ಟೊರೆಂಟ್‌ಗಳಿಗೆ ಮಾತ್ರ ಹಣ ಪಾವತಿ ಮಾಡಬೇಕಿತ್ತು. ಯಾವುದೋ ಒಂದು ಹೊತ್ತು ಮಾತ್ರ ಪ್ಲೇನ್ ಚೀಸ್ ಪಿಜ್ಜಾ ವಿಥ್ ಆಲಿವ್ಸ್ ತೆಗೆದುಕೊಂಡು ತಿಂದೆ. ಅಲ್ಲಿ ಬಹುತೇಕ ಅಡುಗೆ ಪದಾರ್ಥಗಳನ್ನು ಹ್ಯಾಮ್ (ಹಂದಿಮಾಂಸ), ಬೀಫ್ (ದನದ ಮಾಂಸ)ನಿಂದ ತಯಾರಿಸಿರುತ್ತಿದ್ದರು.

## ಉಗ್ರರಿಂದ ಫೈರಿಂಗ್ ಎಚ್ಚರಿಕೆ

'ಎಂಬೆಡ್' ಮುಗಿಯುವ ಹಂತದಲ್ಲಿದ್ದಾಗ ಬೆಟ್ಟದ ತಪ್ಪಲು ಪ್ರದೇಶದಲ್ಲಿ ಸೇನಾ ತುಕಡಿಯ ಚಟುವಟಿಕೆಯ ಫೋಟೊಗ್ರಫಿಗೆ ಹೋಗಿದ್ದೆ. ಅವತ್ತು ಒಂದು ಫೈರಿಂಗ್ ಆಗಿತ್ತು. ದಾಳಿ ನಡೆಸುವ ಉದ್ದೇಶದಿಂದ ಅದನ್ನು ಅವರು ಮಾಡಿರಲಿಲ್ಲ. 'ನಿಮ್ಮ ಹಿಂದೆ ನಾವೂ ಇದ್ದೇವೆ, ಎಚ್ಚರ' ಎಂಬ ಸಂದೇಶವನ್ನು ನೀಡಲು ನಡೆಸಿದ ಫೈರಿಂಗ್ ಅದು ಎಂದು ಗೊತ್ತಾಯಿತು. ನಾವು ಅವತ್ತು ಇದ್ದ ಜಾಗ ಪಾಕಿಸ್ತಾನಕ್ಕೆ ಹತ್ತಿರವಿತ್ತು. ಆ ಪ್ರದೇಶದ ಮೂಲಕವೇ ತಾಲಿಬಾನ್ ಉಗ್ರರು ಕಾಬೂಲ್‌ವರೆಗೂ ಬಂದು ಅಧಿಕಾರವನ್ನು ಮರಳಿ ಪಡೆದಿದ್ದಾರೆ.

ನಿಯೋಜನೆ ಮೇಲೆ ಅಮೆರಿಕದ ಸೈನಿಕರು ಅಫ್ಘಾನಿಸ್ತಾನಕ್ಕೆ ಬಂದಿದ್ದರು. ಮಧ್ಯದಲ್ಲಿ ಕೆಲವರು ತಮ್ಮ ಊರಿಗೆ ಹೋಗಿ ಬರುತ್ತಿದ್ದರಂತೆ. ಕೆಲವರು ನಾಲ್ಕಾರು ವರ್ಷ ಕಳೆದರೂ ಒಮ್ಮೆಯೂ ತವರಿಗೆ ಹೋಗುತ್ತಿರಲಿಲ್ಲ. ಅವರಿಗೆ ಸಕಲ ಸೌಲಭ್ಯವೂ ಸಿಗುತ್ತಿತ್ತು. ಹಲ್ಲುಜ್ಜಲು ಕೂಡ ಮಿನರಲ್ ವಾಟರ್ ಬಳಸುತ್ತಿದ್ದರು. ಊಟೋಪಚಾರ ಮನೆಗಿಂತ ಯಾವ ರೀತಿಯಲ್ಲೂ ಕಡಿಮೆ ಇರಲಿಲ್ಲ. 'ಯುದ್ಧದಲ್ಲಿ ಭಾಗಿಯಾದ ಕೊನೆಯ ವ್ಯಕ್ತಿಗೂ ಐಸ್‌ಕ್ರೀಂ ತಲುಪಿಸುವುದು ತಮ್ಮ ಬದ್ಧತೆ' ಎಂದು ಸೈನಿಕರೊಬ್ಬರು ಹೇಳಿದರು. ಬಗೆ ಬಗೆಯ ಐಸ್‌ಕ್ರೀಂ ದಿನವೂ ಬೇಕಾದಷ್ಟು ಸಿಗುತ್ತಿತ್ತು. ಹೆಲಿಕಾಪ್ಟರ್, ವಿಮಾನದಲ್ಲಿ ಲಕ್ಷಾಂತರ ಬಾಟಲಿಗಳಲ್ಲಿ ನೀರು–ಜ್ಯೂಸ್ ತಂದು ಸುರಿಯುತ್ತಿದ್ದರು. ಎಲ್ಲವನ್ನೂ ನಾನೂ ಬಳಸಬಹುದಿತ್ತು. ಆದರೆ ಒಂದೇ ನಿರ್ಬಂಧ. ಅದೇನೆಂದರೆ, ಅವರ ಸೈಬರ್ ಕೆಫೆ ನೋಡಬಹುದಿತ್ತೇ ವಿನಃ ಬಳಸುವಂತಿರಲಿಲ್ಲ. ಸೈನಿಕರು ಬೇಕಾದಷ್ಟು ಹೊತ್ತು ಬಳಸಬಹುದಿತ್ತು. ವಿಡಿಯೊ ಕಾಲ್ ಮಾಡಬಹುದಿತ್ತು. ನಾನು ನಮ್ಮ ಮನೆಯವರಿಗೆ ವಾರಕ್ಕೆ ಎರಡು ಬಾರಿ ಲ್ಯಾಪ್‌ಟಾಪ್ ಮೂಲಕವೇ ಮಾತನಾಡುತ್ತಿದ್ದೆ. ಉಳಿದಂತೆ ಮೇಲ್ ಮೂಲಕ ಸಂಪರ್ಕದಲ್ಲಿದ್ದೆ. ಸ್ಯಾಟಲೈಟ್ ಜಾಲ ಆಗಿದ್ದರಿಂದ ದುಬಾರಿ. ಒಂದೇ ನಿಮಿಷಕ್ಕೆ ನೂರಾರು ರೂಪಾಯಿ ಖರ್ಚು. ಅದನ್ನು ನಮ್ಮ ಸಂಸ್ಥೆ ಪಾವತಿಸುತ್ತಿತ್ತು. ನನ್ನ ಕಚೇರಿಯಿಂದ ಯಾವುದೇ ನಿರ್ಬಂಧ ಇಲ್ಲದಿದ್ದರೂ ವೈಯಕ್ತಿಕ ಬಳಕೆಗೆ ಮಿತಿ ಹಾಕಿದ್ದೆ.

ಅಮೆರಿಕದ ಬಹುತೇಕ ಸೈನಿಕರು ಚಿಕ್ಕವಯಸ್ಸಿನವರಾಗಿದ್ದರು. 18ರಿಂದ 22 ವರ್ಷದವರೇ ಹೆಚ್ಚು. ಅವರೆಲ್ಲ ಉನ್ನತ ಶಿಕ್ಷಣ ಮಾಡುವ ಸಂಬಂಧ ಸೇನೆಯನ್ನು ಸೇರಿದ್ದರು. ಅವರ ಶಿಕ್ಷಣದ ದುಬಾರಿ ವೆಚ್ಚವನ್ನು ಸೇನೆ ನೀಡುತ್ತಿತ್ತು.

ಅಫ್ಘಾನಿಸ್ತಾನದಲ್ಲಿ ಇತಿಹಾಸ ಮರುಕಳಿಸಿದೆ. ಅಮೆರಿಕ ಸೇನೆ ನಿರ್ಗಮಿಸಿದ ನಂತರ ತಾಲಿಬಾನಿಗಳ ಆಳ್ವಿಕೆ ಮತ್ತೆ ಶುರುವಾಗಿದೆ. ಇದು ಬೇರೆಯದೇ ಕಥೆ. ಒಟ್ಟಿನಲ್ಲಿ, ಈ ಭೂಮಿಯಲ್ಲಿ ಒಂದಲ್ಲಾ ಒಂದು ಕಡೆ ಸಂಘರ್ಷ–ಯುದ್ಧದ ಕಾರಣದಿಂದಾಗಿ ರಕ್ತಪಾತ ನಡೆಯುತ್ತಲೇ ಇರುತ್ತದೆ ಎನ್ನಿಸುತ್ತದೆ. ಈಗ ಉಕ್ರೇನ್ ಮೇಲೆ ಮುಗಿಬಿದ್ದಿರುವ ರಷ್ಯಾ ರಕ್ತಬೀಜಾಸುರನಂತೆ ಕಾಣಿಸುತ್ತಿದೆ. ಶಾಂತಿ ಬಯಸುವ ಯಾರೊಬ್ಬರೂ ಯುದ್ಧವನ್ನು ಕನಸಿನಲ್ಲೂ ಆಹ್ವಾನಿಸಲಾರರು. ಯುದ್ಧಭೂಮಿಯನ್ನು ಕಣ್ಣಾರೆ ಕಂಡ ನನ್ನಂಥವರಿಗಂತೂ ಯುದ್ಧವೆನ್ನುವುದು ದುಃಸ್ವಪ್ನದಂತೆ.

ಪ್ರತಿಕ್ರಿಯಿಸಿ: feedback@sudha.co.in